# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 452**

**ಸದಸ್ಯರ ಹೆಸರು : ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು)**

**ಉತ್ತರಿಸ ಬೇಕಾದ ದಿನಾಂಕ : 19-02-2024**

**ಉತ್ತರಿಸುವವರು : ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಹಕ್ಕುಪತ್ರ ಹೊಂದಿದ ಮತ್ತು ಅರಣ್ಯ ಅತಿಕ್ರಮಣ ಕೃಷಿ ಭೂಮಿಯಲ್ಲಿ ಆನೆ, ಹಂದಿ ಇತ್ಯಾದಿ ಕಾಡು ಪ್ರಾಣಿಗಳಿಂದ ಹಾನಿ ಉಂಟಾದರೆ ಸರ್ಕಾರದಿಂದ ಪರಿಹಾರ ಪಡೆಯಲು ಅವಕಾಶ ಇದೆಯೇ; | ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 ಮತ್ತು ನಿಯಮಗಳು, 2008ರನ್ವಯ ಹಕ್ಕು ಪತ್ರ ಹೊಂದಿರುವ ಕೃಷಿ ಭೂಮಿಯಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಹಾನಿ ಪ್ರಕರಣಕ್ಕೆ ಪರಿಹಾರ ಧನ ನೀಡಲು ಅವಕಾಶವಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಅಪಜೀ 156 ಎಫ್ ಡಬ್ಲ್ಯೂಎಲ್ 2022, ದಿನಾಂಕ: 18/01/2023ರ ಆದೇಶದ ಪ್ರಕಾರ ಒತ್ತುವರಿಗೊಂಡ ಅರಣ್ಯ ಭೂಮಿಯಲ್ಲಿ ಬೆಳೆಯಲಾದ ಬೆಳೆಗಳು ವನ್ಯಪ್ರಾಣಿಯಿಂದ ಹಾನಿಗೊಂಡಲ್ಲಿ ಅಂತಹ ಬೆಳೆ ನಷ್ಟಕ್ಕೆ ಪರಿಹಾರ ನೀಡಲಾಗುವುದಿಲ್ಲ. |
| (ಆ) | ಅವಕಾಶ ಇದ್ದಲ್ಲಿ ಪ್ರಸ್ತುತ ಸಾಲಿನಲ್ಲಿ ಬೆಳಕಿಗೆ ಬಂದ ಪ್ರಕರಣಗಳು ಮತ್ತು ಪರಿಹಾರ ನೀಡಿರುವುದರ ಕುರಿತು ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು? | ಹಕ್ಕು ಪತ್ರ ಹೊಂದಿರುವ ಕೃಷಿ ಭೂಮಿಯಲ್ಲಿ ದಾಖಲಾದ ಪ್ರಕರಣಗಳಿಗೆ ಪ್ರಸಕ್ತ ಸಾಲಿಗೆ ಪಾವತಿಸಲಾದ ಪರಿಹಾರ ಧನದ ವಿವರ ಈ ಕೆಳಕಂತಿದೆ:-<br><br>(ರೂ. ಲಕ್ಷಗಳಲ್ಲಿ) |

| ಜಿಲ್ಲೆ | ವಿಭಾಗ | ಪ್ರಕರಣ | ಪಾವತಿಸಿದ ಪರಿಹಾರ ಮೊತ್ತ |
|---|---|---|---|
| ಚಾಮರಾಜನಗರ | ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ | (ಆಸ್ತಿ ನಷ್ಟ) 01 | 0.20 |
| ರಾಮನಗರ | ಕಾವೇರಿ ವನ್ಯ ಜೀವಿ | (ಮಾನವ ಪ್ರಾಣ ಹಾನಿ) 01 | 15.00 |

ಸಂಖ್ಯೆ: ಅಪಜೀ 31 ಎಫ್‌ಡಬ್ಲ್ಯೂಎಲ್ 2024

Bekande

**(ಈಶ್ವರ ಬಿ. ಖಂಡ್ರೆ)**
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**